ದಿನಾಂಕಃ 02-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ **1** ನೇ ಪ್ರತಿವಾದಿಯ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರವನ್ನು ಈಗಾಗಲೇ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಹಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಹಕ್ಕು ಬದಲಾವಣೆ ರಿಜಿಸ್ಟರ್ ಎಕ್ಸಟ್ರ್ಯಾಕ್ಟನ್ನು ನಿಡಿ 1 ಎಂದು, 32 ಬ್ಯಾಂಕ ರಸೀದಿಗಳನ್ನು ನಿಡಿ 2 ರಿಂದ 33 ಎಂದು, 3 ಬಿಲ್ಲುಗಳನ್ನು ನಿಡಿ 34 ರಿಂದ 36 ಎಂದು, 3 ಸಾಲದ ಖಾತೆಯ ಎಕ್ಸಟ್ರ್ಯಾಕ್ಟಗಳ ದೃಢಿಕೃತ ನಕಲುಗಳನ್ನು ನಿಡಿ 37 ರಿಂದ 39 ಎಂದು, ಓ ಎಸ್ ನಂ.177/2011 ರ ಆದೇಶ ಪುಟದ ದೃಢಿಕೃತ ನಕಲನ್ನು ನಿಡಿ 40 ಎಂದು, ಪ್ರಥಮ ವರ್ತಮಾನ ವರದಿಯ ದೃಢಿಕೃತ ನಕಲನ್ನು ನಿಡಿ 41 ಎಂದು, ಅಂತಿಮ ವರದಿಯ ದೃಢಿಕೃತ ನಕಲನ್ನು ನಿಡಿ 42 ಎಂದು, ಸಿ. ಸಿ. ನಂ .1264/2018 ರ ಆದೇಶ ಪುಟದ ದೃಢಿಕೃತ ನಕಲನ್ನು ನಿಡಿ 43 ಎಂದು, ಸಿ. ಸಿ. ನಂ.1240/2018 ರ ಆದೇಶ ಪುಟದ ದೃಢಿಕೃತ ನಕಲನ್ನು ನಿಡಿ 44 ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಡಿ 45 ಎಂದು ಮತ್ತು ಎಸ್. ಸಿ. ನಂ.02/2001 ರ ಅಂತಿಮ ವರದಿಯ ದೃಢಿಕೃತ ನಕಲನ್ನು ನಿಡಿ 46 ಎಂದು ಗುರುತಿಸಲಾಯಿತು.

ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ